International Journal of Kannada Research
www.kannadajournal.com

ISSN: 2454–5813
IJKR 2022; 8(1): 01-03
© 2022 IJKR
www.kannadajournal.com
Received: 16-10-2021
Accepted: 02-12-2021

**ಡಾ.ಎನ್.ಆರ್.ಚಂದ್ರೇಗೌಡ**
ಸಹ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ಕರ್ನಾಟಕ, ಭಾರತ

Corresponding Author:
**ಡಾ.ಎನ್.ಆರ್.ಚಂದ್ರೇಗೌಡ**
ಸಹ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ಕರ್ನಾಟಕ, ಭಾರತ

# ಲಲಿತ ಪ್ರಬಂಧದ ವೈಶಿಷ್ಟ್ಯತೆಗಳು

**ಡಾ. ಎನ್.ಆರ್.ಚಂದ್ರೇಗೌಡ**

ಪ್ರಾಚೀನ ಭಾರತೀಯ ಸಾಹಿತ್ಯಗಳಲ್ಲಿ 'ಪ್ರಬಂಧ' ಎಂಬ ಶಬ್ದ, ಸಾಹಿತ್ಯ ಕೃತಿ ಅಥವಾ ಕಾವ್ಯ ಎಂಬ ಸಾಮಾನ್ಯ ಅರ್ಥದಲ್ಲಿ ಬಳಸಲಾಗಿದೆ. ಇದು ಕನ್ನಡ ಸಾಹಿತ್ಯಕ್ಕೂ ಅನ್ವಯಿಸುತ್ತದೆ. 'ಬಂಧ' ಎಂಬ ಮಾತಿಗೆ ಕಟ್ಟು, ಕಟ್ಟುವುದು ಎಂದು ಅರ್ಥ. 'ಪ್ರ' ಎಂಬ ಉಪಸರ್ಗ ಸಂಯೋಗದಿಂದ ವಿಶೇಷ ಶಬ್ದ ರಚನೆ, ಕಾವ್ಯ ಎಂಬ ಅರ್ಥ ಬೆಳೆದು ಬಂತು. ಪ್ರಬಂಧ ಎಂಬ ಸಾಹಿತ್ಯ ರೂಪ ಕನ್ನಡಕ್ಕೆ ಇಂಗ್ಲಿಷ್‌ನ ಕೊಡುಗೆಯಾಗಿದ್ದರೂ ಕನ್ನಡ ಸಾಹಿತ್ಯದಲ್ಲಿಯೇ ಹುಟ್ಟಿ ಬೆಳೆದದ್ದು ಎಂಬಂತೆ ಸ್ವಂತ ಸತ್ವದಿಂದ ಶೋಭೆ ಪಡೆದಿದೆ. ಸಾಹಿತ್ಯ ಗುಣ ಸಿದ್ಧಿಸುವಂತೆ ವಿಶಿಷ್ಟ ಪದಬಂಧಗಳಿಂದ ನಿರ್ಮಾಣವಾದ ಯಾವ ಸಾಹಿತ್ಯ ಕೃತಿಯನ್ನಾದರೂ ಪ್ರಬಂಧ ಎಂದು ಹೇಳಬಹುದು. ಕನ್ನಡದ ಅನೇಕ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳನ್ನು 'ಪ್ರಬಂಧ' ಎಂದು ಕರೆದಿರುವುದುಂಟು. ಪ್ರಾಚೀನರ ದೃಷ್ಟಿಯಲ್ಲಿ ಪ್ರಬಂಧ ಎಂದರೆ ಕಾವ್ಯ ಎಂದರ್ಥ. ಆದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಎಂಬ ಶಬ್ದವನ್ನು ಇಂಗ್ಲಿಷಿನ 'ಎಸ್ಸೆ' ಶಬ್ದಕ್ಕೆ ಸಮಾನಾರ್ಥಕವಾಗಿ ಬಳಸುತ್ತಿದ್ದೇವೆ. ಇಂಗ್ಲಿಷ್‌ನ ಎಸ್ಸೆ ಒಂದು ಗದ್ಯ ಸಾಹಿತ್ಯ ಪ್ರಕಾರ. ಇಂಗ್ಲಿಷ್‌ನ ಎಸ್ಸೆ ಕನ್ನಡದಲ್ಲಿ ಪ್ರಬಂಧ, ಲಘು ಪ್ರಬಂಧ, ಲಲಿತ ಪ್ರಬಂಧ, ಪ್ರಸಂಗ, ನ್ಯಾಸ, ನಿಬಂಧ, ಹರಟೆ, ಚಿತ್ರ ಎಂಬ ಶಬ್ದಗಳನ್ನು ಬಳಸುವುದಿದೆ. ಸಾಮಾನ್ಯವಾಗಿ ವಿಮರ್ಶಕರು ಬಳಸುವ ಭಾವಪ್ರಬಂಧ, ಲಲಿತ ಪ್ರಬಂಧ, ಲಘುಪ್ರಬಂಧ ಎಂಬ ಪದಗಳಲ್ಲಿನ ವಿಶೇಷಣಗಳುಪ್ರಬಂಧದ ಕಾವ್ಯಗುಣವನ್ನು ಶೈಲಿಯ ಸೊಬಗನ್ನೂ ಸಂಕ್ಷಿಪ್ತವೂ ಹಗುರವೂ ಆದ ನಿರೂಪಣಾ ಕ್ರಮವನ್ನು ಸೂಚಿಸುತ್ತದೆ. ಸ್ವಂತ ಭಾವನೆಗಳನ್ನು ಆಲೋಚನೆಗಳನ್ನು ಇನ್ನೊಬ್ಬರಿಗೆ ಆತ್ಮೀಯವಾಗಿ ಹೇಳುವ ಪ್ರಬಂಧದ ವ್ಯಕ್ತಿನಿಷ್ಠ ಕಥನ ಕ್ರಮದಲ್ಲಿ ಹರಟೆಯ ಧೋರಣೆ ಇದ್ದರೂ ಪ್ರಬಂಧ ಹೆಚ್ಚು ಗಂಭೀರವಾದದ್ದು. ಆದರೂ ಪ್ರಬಂಧ ಮತ್ತು ಹರಟೆ ಒಂದೇ ಸಾಹಿತ್ಯ ಪ್ರಕಾರದ ಅವಳಿ–ಜವಳಿಗಳೆಂದು ಗುರುತಿಸಬಹುದು. 'ಹರಟೆ', 'ಪ್ರಬಂಧ' ಮತ್ತು 'ಲಲಿತ ಪ್ರಬಂಧ' ಎಂದೆಲ್ಲಾ ಕನ್ನಡದಲ್ಲಿ ಈ ಬರೆಹಕ್ಕೆ ಹೆಸರು ಬಂದಿದೆ. ಹರಟೆ ಎಂಬ ಹೆಸರು ಹಗುರವಾದುದು, ಪ್ರಬಂಧವೆಂದರೆ ಬಲು ಭಾರ ಅಥವಾ ಗಂಭೀರ. ಇದನ್ನು ಲಲಿತ ಪ್ರಬಂಧವೆಂತಲೂ ಕರೆಯಬಹುದೇ? ಎಂದೆಲ್ಲಾ ಚರ್ಚಿಸಲಾಗಿದೆ. ಆದರೆ ಈ ಬಗೆಯ ವಿಶಿಷ್ಟ ಗದ್ಯ ಬರೆಹವನ್ನು ಪ್ರಬಂಧವೆಂತಲೂ, ಲಲಿತ ಪ್ರಬಂಧವೆಂದೂ ಕರೆಯುವ ರೂಢಿಯಿದೆ.

ನವೋದಯ ಕಾಲದಲ್ಲಿ ಕಾಣಿಸಿಕೊಂಡ ಸಾಹಿತ್ಯ ಪ್ರಕಾರಗಳಲ್ಲಿ ಲಲಿತ ಪ್ರಬಂಧವೂ ಒಂದಾಗಿದೆ. ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಪ್ರಕಾರವಿತ್ತೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಕನ್ನಡದಲ್ಲಿ ಈ ಪ್ರಕಾರ ಇತ್ತು, ಆದರೆ ಪಾಶ್ಚಾತ್ಯರಲ್ಲಿದ್ದ ಲಲಿತ ಪ್ರಬಂಧದ ಲಕ್ಷಣಗಳುಕನ್ನಡ ಪ್ರಬಂಧಗಳಲ್ಲಿ ಇರಲಿಲ್ಲವಷ್ಟೆ. ಗಳಗನಾಥ ಮತ್ತು ಗುಲ್ವಾಡಿ ಅವರ ಕಾದಂಬರಿ ಗಳಲ್ಲಿ ಕನ್ನಡ ಲಲಿತ ಪ್ರಬಂಧದ ಲಕ್ಷಣಗಳು ಕಂಡುಬರುತ್ತವೆ. ಕನ್ನಡದ ಲಲಿತ ಪ್ರಬಂಧ ಮೊದಲು ಅನುವಾದದ ಮೂಲಕ ಆರಂಭವಾಯಿತು. ಬಿ.ವೆಂಕಟಾಚಾರ್ಯರು ಬಂಗಾಳಿಯ ಬಂಕಿಮಚಂದ್ರರ ಪ್ರಬಂಧವನ್ನು ಕನ್ನಡಕ್ಕೆ 'ಲೋಕರಹಸ್ಯ' ಶೀರ್ಷಿಕೆಯ ಮೂಲಕ ಅನುವಾದಿಸಿರುವುದು ಕನ್ನಡದ ಮೊದಲ ಲಲಿತ ಪ್ರಬಂಧವಾಗಿದೆ. ಮುಂದಿನ ಪ್ರಬಂಧಗಳ ರಚನೆಗೆ ಇದು ನಾಂದಿಯಾಯಿತು. ನವೋದಯ ಕಾಲದ ಪ್ರಮುಖ ಬರಹಗಾರರಾದ ಗೊರೂರು, ರಾಕಿ, ಪು.ತಿ.ನ., ಕುವೆಂಪು, ಸತ್ಯನಾರಾಯಣ ಮುಂತಾದವರುಪ್ರಬಂಧ ಸಾಹಿತ್ಯವನ್ನು ಸಮೃದ್ಧಗೊಳಿಸಿದರು. ಎ.ಎನ್.ಮೂರ್ತಿರಾವ್, ರಾಕು, ಪುತಿನ, ವೀ.ಸಿ. ಇವರಂತೂ ಪ್ರಬಂಧ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅನನ್ಯವಾದುದು.

ಪ್ರಬಂಧ ಸಾಹಿತ್ಯ ಪ್ರಗತಿಶೀಲ–ನವ್ಯದ ಸಂದರ್ಭದಲ್ಲಿ ಸೊರಗುವಿಕೆಯಾದರೂ ಅನಂತರ ಹೊಸ ಲೇಖಕರ ಮೂಲಕ ಮತ್ತೆ ಪ್ರವರ್ಧಮಾನಕ್ಕೆ ಬಂದಿತೆನ್ನಬಹುದು. ನವ್ಯ, ದಲಿತ–ಬಂಡಾಯ ಬರಹಗಾರರು ಕೂಡ ಪ್ರಬಂಧ ಸಾಹಿತ್ಯಕ್ಕೆ ಸೃಜನಶೀಲತೆಗೆ ಹೆಚ್ಚು ಮಹತ್ವ ನೀಡಿದರು.

ಮೊದಲಿದ್ದ ಲಲಿತ ಪ್ರಬಂಧಗಳ ಕೆಲವು ಅಂಶಗಳಿಗೆ ಬದಲಾಗಿ ಇನ್ನೊಂದು ಹೊಸ ದಿಕ್ಕಿನ ಕಡೆ ಹೆಜ್ಜೆ ಇಟ್ಟಿದ್ದಾರೆ. ಸಿದ್ಧಲಿಂಗಯ್ಯ, ಪ್ರತಿಭಾನಂದಕುಮಾರ್, ಮೊಗಳ್ಳಿ ಗಣೇಶ್, ವೈದೇಹಿ, ರಾಮಚಂದ್ರದೇವ, ನೇಮಿಚಂದ್ರ, ಪಿ.ಲಂಕೇಶ ಮತ್ತು ತೇಜಸ್ವಿ ಇವರ ಪ್ರಬಂಧಗಳಲ್ಲಿ ಬದಲಾವಣೆಯನ್ನು ಗುರುತಿಸಬಹುದು. 20 ನೇ ಶತಮಾನದ ಉತ್ತರಾರ್ಧದಲ್ಲಿ ಕೆಲವು ಪ್ರಬಂಧಗಳು ತನ್ನ ಲಕ್ಷಣಗಳನ್ನು ಬದಲಿಸಿಕೊಂಡಿವೆ. ಅಂದರೆ ವಸ್ತು, ಭಾಷೆ, ನಿರೂಪಣೆ, ಅಭಿವ್ಯಕ್ತಿಯಲ್ಲಿ ಹೊಸ ಮಾರ್ಪಾಡುಗಳನ್ನು ಮಾಡಿಕೊಂಡಿವೆ.

ವಿ.ಕೃ.ಗೋಕಾಕ್ ಅವರು ಪ್ರಬಂಧ ಸಂಕಲನಕ್ಕೆ ಬರೆದಿರುವ ಮುನ್ನುಡಿ ಚಾರಿತ್ರಿಕ ಮಹತ್ವವುಳ್ಳದ್ದು. ಆವರೆಗೆ ಬಂದ ಪ್ರಬಂಧದ ಬೆಳೆಸನ್ನು ಅನುಲಕ್ಷಿಸಿ ಕನ್ನಡ ಪ್ರಬಂಧ ಸಾಹಿತ್ಯವನ್ನು ಲಕ್ಷಣಾನುಸಾರವಾಗಿ ಈ ಮುಂದಿನಂತೆ ವರ್ಗೀ ಕರಿಸಿದ್ದಾರೆ: 1. ಚಿಂತನಾಪರ ಪ್ರಬಂಧ 2. ಚರಿತ್ರೆಯ ಪ್ರಬಂಧ 3. ಐತಿಹಾಸಿಕ ಪ್ರಬಂಧ 4. ವೈಜ್ಞಾನಿಕ ಪ್ರಬಂಧ 5. ವಿಮರ್ಶಾತ್ಮಕ ಅಥವಾ ವಿವೇಚನಾತ್ಮಕ ಪ್ರಬಂಧ 6. ಸ್ವಭಾವ ವಿಭಜನ ಪ್ರಬಂಧ 7. ಲಘು ಕಥನಾತ್ಮಕ ಪ್ರಬಂಧ 8. ವರ್ಣನಾಪರ ಪ್ರಬಂಧ 9. ಪತ್ರ ಪ್ರಬಂಧ ಅಥವಾ ಹರಟೆಯೋಲೆ 10. ವಿಡಂಬನಾತ್ಮಕ ಪ್ರಬಂಧ 11. ವ್ಯಕ್ತಿ ಚಿತ್ರಗಳು 12. ಸ್ಮೃತಿ ಚಿತ್ರಗಳು. ಇವುಗಳಲ್ಲಿ ವರ್ಣನಾತ್ಮಕ, ಚಿಂತನಾತ್ಮಕ, ವಿಚಾರಾತ್ಮಕ ಅಥವಾ ವಿವೇಚನಾತ್ಮಕ ಮತ್ತು ಲಘು ಪ್ರಬಂಧ ಅಥವಾ ಹರಟೆ ಎಂದು ನಾಲ್ಕೈದು ಸ್ಥೂಲ ಪ್ರಭೇದಗಳಾಗಿ ವಿಂಗಡಿಸಿಕೊಳ್ಳುವುದು ಸೂಕ್ತ ಎಂದಿದ್ದಾರೆ.

**ಪ್ರಬಂಧದ ಬಗ್ಗೆ ಕೆಲವು ಲೇಖಕರ ವ್ಯಾಖ್ಯಾನಗಳು:**

- ಪ್ರೀಸ್ಲೆ ಎಂಬುವವನು 'ಹರಟೆಗಾರನೂ ಒಬ್ಬ ಕವಿ'. ಆದರೆ ಅವನ ಕೈಯಲ್ಲಿ ಕಿಂದರಿಯಿಲ್ಲ. ಅದನ್ನು ಬದಿಗಿರಿಸಿ ಚಿಲುಮೆಹೊತ್ತಿಸಿ ವಿಚಾರಮಗ್ನನಾಗಿ ನೆಮ್ಮದಿಯಾಗಿ ಹೊಗೆ ಉಗುಳುತ್ತಾ ಆರಾಮವಾಗಿ ಬೆಂಕಿಯ ಮುಂದೆ ಚಳಿ ಕಾಯಿಸುತ್ತಾ ಕೂತ ದಾರ್ಶನಿಕನಿವನು ಎಂದಿದ್ದಾನೆ.
- ಗೋಕಾಕ್ ಅವರು 'ಸಮತ ಗೀತೆಯಂತೆ ಮಿತಿಮೀರಿ ಹೊಮ್ಮುವ ಉತ್ಕಟ ರಸೋದ್ರೇಕದಿಂದ ಅದು ಬಂದುದಲ್ಲ; ವಿಶ್ರಾಂತಿ ಪೂರ್ಣವಾದ ಮನಸ್ಥಿತಿಯಲ್ಲಿ ಲಹರಿಲಹರಿಯಾಗಿ ಸಾವಕಾಶವಾಗಿ ವ್ಯಕ್ತವಾಗುವುದು' ಎಂದು ವ್ಯಕ್ತಪಡಿಸಿದ್ದಾರೆ.
- ಕುವೆಂಪು ಅವರು– 'ಹರಟೆಗೆ ತುದಿಯಿಲ್ಲ, ಬುಡವಿಲ್ಲ, ಗೊತ್ತಿಲ್ಲ, ಗುರಿಯಿಲ್ಲ, ಜಗತ್ತಿನಲ್ಲಿ ದೇವರಿಗೆ ಸರಿಸಮನಾಗಿರುವುದೆಂದರೆ ಹರಟೆಯೊಂದೇ! ಹರಟೆಯೆಂದರೆ ಬೇಜಾರಿಗೆ ಭೇಷಜವಿದ್ದ ಹಾಗೆ. ಪೂರ್ವಾನುಭವಗಳೆಂಬ ಸ್ವಪ್ನಾರಣ್ಯದಲ್ಲಿ ಪೋಲಿಪೋಲಿಯಾಗಿ ಅಲೆಯುವುದೇ ಹರಟೆ? ಈ ಸಾಹಿತ್ಯದಲ್ಲಿ ವಾಚಕನಿಗೂ ಲೇಖಕನಿಗೂ ಆತ್ಮೀಯತೆ ಬೆಳೆಯುತ್ತದೆ. ಈಬಗೆಯ ಆತ್ಮೀಯತೆಯಿಂದ, ನಿಜವಾದ ನಿರ್ದಿಷ್ಟವಾದ ಪೂರ್ಣತೆ ಪಡೆದು ಎಸ್ಸೆ ಹುಟ್ಟುವುದು. ಅದು ಆತ್ಮ ವಿನೋದವಾದುದರಿಂದ, ಭಾವಗೀತೆಯಂತೆ, ಮನಸ್ಸಿನ ಸ್ವಚ್ಛಂದ ಲಹರಿಯ ಪ್ರತೀಕವಾಗುವುದು' ಎಂದಿದ್ದಾರೆ.
- ವೀ.ಸಿ. ಅವರು 'ಮನಸ್ಸಿನ ಸ್ವಚ್ಛಂದ ಲಹರಿ ಕಟ್ಟುನಿಟ್ಟಿಲ್ಲದ ಮತ್ತು ಚಿಂತನೆಗೊಳಗಾದ ಸಣ್ಣ ಕೃತಿ, ನಿಯತವಾದ ಕ್ರಮಬದ್ಧ ರಚನೆಯಲ್ಲ ಎಂಬ ಮನಸ್ಸಿನ ಒಲವು ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಿಯೆ ಪ್ರಬಂಧ' ಎಂದಿದ್ದಾರೆ.
- ಎಚ್ಕೆ ಅವರು– 'ಆಡಿದ್ದೇ ಆಟ ನೋಡಿದ್ದೇ ನೋಟ ಎಂಬಂತೆ ಪ್ರಬಂಧವು ತನ್ನ ತೆಕ್ಕೆಯಲ್ಲಿ ಎಲ್ಲ ವಿಷಯಗಳನ್ನು ಹಾಕಿಕೊಳ್ಳುತ್ತದೆ ಎಂದು ತಿಳಿಸುತ್ತದೆ. ಜೀವನದ ರಸ ನಿಮಿಷ, ದುಃಖದ ಸನ್ನಿವೇಶ, ಪ್ರವಾಸ, ಬಸ್ ಕಾಯುವ ಸಮಯ, ಗೆಳೆಯ ಗೆಳತಿಯರ ಪ್ರೇಮಪತ್ರಗಳ ರಂಜನೆ, ನಿರ್ಜೀವ ವಸ್ತುಗಳ ಮಾತುಕತೆ ಹೀಗೆ ಏನಾದರೂ ಆಗಿರಬಹುದು. ಯಾವ ದಿಕ್ಕಿನಿಂದಲೂ ಅವನು ವಸ್ತುಗಳನ್ನು ಆರಿಸಿಕೊಳ್ಳಬಹುದು. ಪರಮಾನ್ನದಿಂದ ಪಾರಮಾರ್ಥದವರೆಗಿನ ಪ್ರಪಂಚ ಅವನಿಗೆ ತೆರೆದಿಟ್ಟಿದೆ'. ಎಂದಿರುವುದು ಪ್ರಬಂಧದ ವೈಶಾಲ್ಯತೆಯನ್ನು ತಿಳಿಸುತ್ತದೆ.

**ಪ್ರಬಂಧದ ಪ್ರಮುಖ ಅಂಶಗಳು:**

- ಸಂಕ್ಷಿಪ್ತತೆ ಮತ್ತು ಅಸಮಗ್ರತೆಯಲ್ಲಿಯೂ ಪರಿಪೂರ್ಣತೆಯ ತೋರಿಕೆ ಈ ಬರೆಹದ ವಿಶಿಷ್ಟ ಲಕ್ಷಣ.
- ಪ್ರಬಂಧಕ್ಕೆ ವಿಷಯ ಇಂತಹುದೇ ಆಗಬೇಕೆಂಬ ನಿಯಮವಿಲ್ಲ. ಸಣ್ಣ ವಿಷಯ, ದೊಡ್ಡ ವಿಷಯ, ಯಾವುದು ಬೇಕಾದರೂ ಅಗಬಹುದು.
- ಪ್ರಬಂಧವನ್ನು ಓದಿದ ಕೂಡಲೇ ತೃಪ್ತಿಯ ಮನೋಭಾವ ಉಂಟಾಗಬೇಕು, ಹೇಳುವುದನ್ನೆಲ್ಲ ಹೇಳಿಯಾಯಿತು ಎಂಬಂತಿರಬಾರದು.
- ಒಂದು ದೃಷ್ಟಿಯಿಂದ ಪೂರ್ಣವಾಗಿ ತೋರಿದರೂ ಮತ್ತೊಂದು ದೃಷ್ಟಿಯಿಂದ ಹೆಚ್ಚಿನ ಜ್ಞಾನಕ್ಕೆ ಅದು ಸೋಪಾನವಾಗಬೇಕು.
- ಉತ್ತಮವಾದ ಪ್ರಬಂಧ ನಮ್ಮನ್ನೂ ಸಂತೋಷಪಡಿಸಬೇಕು, ತಿದ್ದುವಂತಿರಬೇಕು, ಭಾವನೆಗಳು, ಅನುಭವಗಳು, ಹಾಸ್ಯ ನಗೆ ಇವು ಉದ್ದಕ್ಕೂ ಮಿಂಚುತ್ತಿರಬೇಕು.
- ಗುರಿ ಮುಟ್ಟುವುದೊಂದೇ ಮುಖ್ಯವಲ್ಲ, ಜೀವನ ಪ್ರಯಾಣವೂ ಆಕರ್ಷಕವಾಗಿರಬೇಕು.
- ಒಂದೊಂದು ಪ್ರಬಂಧ ಸಂಕಲನದ ಹಿಂದೆಯೂ ಪ್ರಬಂಧಕಾರನ ಸೂಕ್ಷ್ಮ ಸಂವೇದನೆ ಕೆಲಸ ಮಾಡಿರುತ್ತದೆ.
- ಪ್ರಬಂಧಕಾರನ ಜಾತಿ, ವರ್ಗ, ಗ್ರಹಿಕೆಯ ಕ್ರಮ, ವೈಚಾರಿಕ ಪ್ರಜ್ಞೆಗಳು ನೇರವಾಗಿ ಕಾಣದೆ ಅಗೋಚರವಾಗಿ ನೆಲೆಗೊಂಡಿರುತ್ತವೆ.
- ನಾಡಿನ ವಿಭಿನ್ನ ನೆಲೆಯಿಂದ ಬಂದ ಬರಹಗಾರರಿಂದ ಬಂದ ಪ್ರಬಂಧಗಳು ಅವರ ಪರಿಸರದ ಭೌಗೋಳಿಕ, ಧಾರ್ಮಿಕ, ಸಾಂಸ್ಕೃತಿಕ ಮಾಹಿತಿಯನ್ನು ಒಳಗೊಂಡಿರುತ್ತವೆ.
- ಚಿಂತನೆ, ಪ್ರೌಢತೆ, ಹಾಸ್ಯ–ಹರಟೆ ಇವುಗಳು ಆತ್ಮನಿವೇದನೆಯ ರೀತಿಗಳಲ್ಲಿ ಮಾನಸಿಕ ಸ್ಥೈರ್ಯವನ್ನು ಪ್ರಬಂಧ ಸಾಹಿತ್ಯ ನೀಡುತ್ತದೆ.
- ಹಾಸ್ಯದೊಡನೆ ತೀಕ್ಷ್ಣ ಸಂವೇದನೆಯನ್ನು ಹೊಂದಿವೆ.
- ಸರಳತೆಯಿಂದ ಸಂಕೀರ್ಣತೆಯೆಡೆಗೆ, ಚಪಲತೆಯಿಂದ ಗಂಭೀರದೆಡೆಗೆ, ಹಾಸ್ಯದಿಂದ ವಿಚಾರದ ಕಡೆಗೆ ಕೊಂಡೊಯ್ಯುತ್ತದೆ.
- ವಿಸ್ತಾರವಾದ ಜೀವನಾನುಭವದಿಂದ ವ್ಯಕ್ತವಾಗಿರುವ ಪ್ರಬಂಧಗಳು ಸಹೃದಯರನ್ನು ಭಾವನಾಪ್ರಪಂಚಕ್ಕೆ ಹೊಯ್ದು ವಾಸ್ತವ ಜಗತ್ತನ್ನು ಮರೆಸುತ್ತವೆ.
- ವಕ್ರೋಕ್ತಿ, ವಿಡಂಬನೆ, ಲೇವಡಿಗಳಿಗಿಂತ, ವಿನೋದ ಹಾಸ್ಯಗಳು ಓತಪ್ರೋತವಾಗಿ ಬರುತ್ತವೆ.
- ಆತ್ಮೀಯವಾದ, ಆಪ್ತವಾದ ಮಾತಿನ ಶೈಲಿ, ಶ್ಲೇಷೆ, ಕಟಕಿ,

ವ್ಯಂಗ್ಯ, ವಿಡಂಬನೆ, ಹಾಸ್ಯ–ವಿನೋದದ ಹಿಂದೆ ನೋವಿನ, ಸಂಕಟದ, ದುಃಖದ ಕರಿನೆರಳ ಛಾಯೆಯಿರುತ್ತದೆ.

**ಪಾಶ್ಚಾತ್ಯ ದೇಶದ ಪ್ರಮುಖ ಪ್ರಬಂಧಕಾರರು:**
ಫ್ರಾನ್ಸ್ ದೇಶದ ಮಾಂಟೇನ್ (1533–1592) 'ಎಸ್ಸೆ' ಪದವನ್ನು ಚಲಾವಣೆಗೆ ತಂದದ್ದು ಸರ್ವವಿಧಿತವಾದುದು. ಈ ಸಾಹಿತ್ಯ ಪ್ರಕಾರದ ಪ್ರವರ್ತಕನೂ ಹೌದು. ಈತನ ತರುವಾಯ ಎರಡನೆಯ ದೊಡ್ಡ ಹೆಸರು ಇಂಗ್ಲೇಂಡಿನ ಫ್ರಾನ್ಸಿಸ್ ಬೇಕನ್ (1561–1626), ಅಬ್ರಾಹಂ ಕೌಲಿ (1618–1667), ರಿಚರ್ಡ್ ಸ್ಟೀಲ್ (1709–11), ಸ್ಯಾಮ್ಯುಯಲ್ ಜಾನ್ ಸನ್ (1709–1784), ಚಾರ್ಲ್ಸ್ ಲ್ಯಾಮ್ (1775–18340, ಲೀ ಹಂಟ್ (1784–1859), ಫ್ರಾನ್ಸಿಸ್ ಜೆಫ್ರಿ (1773–1850), ವಿಲಿಯಂ ಹ್ಯಾಸ್ಲಿಟ್ (1778–1830), ಥಾಮಸ್ ಡಕ್ವಿನ್ಸಿ (1785–1859) ಹಾಗೂ 20 ನೇ ಶತಮಾನದಲ್ಲಿ ಹಿಲೇರ್ ಬೆಲಕ್, ಮ್ಯಾಕ್ಸ್ ಬೀರ್ಬಾಮ್, ಇ.ವಿ.ಲೂಕಾಸ್, ಎ.ಜಿ.ಗಾರ್ಡಿನರ್, ರಾಬರ್ಟ್ ಲಿಂಡ್ ಮೂಂತಾದವರು. ಫ್ರಾನ್ಸ್ ನ ಸೈಂಟ್ ಬವ್, ಆ್ಯಂತೊಲೆ ಫ್ರಾನ್ಸ್ ಹಾಗೂ ಅಮೇರಿಕಾದ ಹೆನ್ರಿ ಡೇವಿಡ್ ಥೋರೊ ಮತ್ತು ಎಮರ್ಸನ್ ಮುಂತಾದವರು ಪ್ರಬಂಧ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ.

**ಕನ್ನಡದ ಪ್ರಮುಖ ಪ್ರಬಂಧಕಾರರು:**
ಕನ್ನಡದಲ್ಲಿ ಮೊದಲಿಗೆ ಪ್ರಬಂಧ ಸಂಕಲನ ಸೃಷ್ಟಿಯಾದದ್ದು ಬಹುಶಃ 1898 ರಲ್ಲಿ. ಬಂಕಿಮಚಂದ್ರರ ಬಂಗಾಳಿ ಪ್ರಬಂಧಗಳನ್ನು ಬಿ. ವೆಂಕಟಾಚಾರ್ಯರು ಕನ್ನಡದಲ್ಲಿ 'ಲೋಕ ರಹಸ್ಯ' ಶೀರ್ಷಿಕೆಯಲ್ಲಿ ಅನುವಾದಿಸಲಾಗಿದೆ. ಅನಂತರ ಪ್ರಕಟವಾದ ಕನ್ನಡದ ಮೊದಲ ಪ್ರಬಂಧ ಸಂಕಲನ ಲಲಿತ ಪ್ರಬಂಧಗಳು. ಆರ್.ಶ್ರೀನಿವಾಸರಾವ್ ಅವರ 'ವಿವೇಕ ಮಂಜರಿ' ಪ್ರಬಂಧ ಮುಖ್ಯವಾದುದು. ಎನ್. ಪ್ರಹ್ಲಾದರಾವ್ (ರಥ–ರಥಿಕ, ಮಧುವ್ರತ, ಮುತ್ತಿನಹಾರ) ಮತ್ತು ಎಚ್ಚೆಸ್ಕೆ (ಕಳ್ಳ ಹೊಕ್ಕಮನೆ, ಜೇಡನ ಬಲೆ) ಇವರು ಪ್ರಮುಖ ಪ್ರಬಂಧಕಾರರೆನಿಸಿಕೊಂಡಿದ್ದಾರೆ. ವೀ.ಸಿ. (ಮೈಸೂರು ರುಮಾಲು, ಖಾಯಿಲೆಗಳು), ತೀ.ನಂ.ಶ್ರೀ. (ಮನೆಗಳು), ಎ.ಎನ್.ಮೂರ್ತಿರಾವ್ (ಗೌರಜ್ಜಿ), ಎಂ.ವೀ.ಸಿ. (ಮುಗಿಲುಗಳು, ಹೆಸರುಗಳು) ಮುಂತಾದ ಪ್ರಬಂಧಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಆಲೂರು ವೆಂಕಟರಾಯರು , ಪಂಜೆ, ಶಂಕರಭಟ್ಟರು ಜೆ. ವಾಮನಭಟ್ಟ, ಮುಂತಾದವರ ವೈಚಾರಿಕ ಪ್ರಬಂಧಗಳು ಪತ್ರಿಕೆಗಳ ಮೂಲಕ ಹೊರಬಂದವು. ಪ್ರಾರಂಭದಲ್ಲಿ ಹರಟೆಗಳು ಎಂಬ ಪ್ರಬಂಧ ಪ್ರಕಟವಾದದ್ದು ಧಾರವಾಡದ ಗೆಳೆಯರ ಗುಂಪಿನ ದ.ರಾ.ಬೇಂದ್ರೆ, ವಿ.ಕೃ.ಗೋಕಾಕ್, ರಂ.ಶ್ರೀ. ಮುಗಳಿ, ಮಧುರಚೆನ್ನ ಮುಂತಾದವರ ರಚನೆಗಳು ಪ್ರಬಂಧಕ್ಷೇತ್ರಕ್ಕೆ ಪ್ರವೇಶಿಸಿದವು.
ಪುತಿನ– 'ರಾಮಾಚಾರಿಯ ನೆನಪು' (1931), ಅನಕೃ– 'ಹೊಸಹುಟ್ಟು' (1934), ಎ.ಎನ್.ಮೂರ್ತಿರಾವ್– 'ಹಗಲುಗನಸುಗಳು' (1937), ಜೆ.ವಾಮಭಟ್ಟ– 'ಕೋದಂಡನ ಉಪನ್ಯಾಸಗಳು' (1937) ಈ ಕೆಲವು ಪ್ರಬಂಧ ಸಂಗ್ರಹಗಳು ಪ್ರಕಟವಾಗಿ ಪ್ರಬಂಧ ಸಾಹಿತ್ಯ ನಿರ್ಮಿತಿಗೆ ಮಾರ್ಗದರ್ಶಕವಾದವು. ಹಾ.ಮಾ.ನಾಯಕ (ನಮ್ಮ ಮನೆಯ ದೀಪ), ಎಚ್.ಎಲ್. ನಾಗೇಗೌಡ (ನನ್ನೂರು), ಹಿರೇಮಲ್ಲೂರ ಈಶ್ವರನ್ (ಶಿವನ ಬುಟ್ಟಿ), ಕಲ್ಯಾಣ ಸುಂದರ (ಸ್ನೇಹದೃಷ್ಟಿ), ಆನಂದ (ಆನಂದ ಲಹರಿ), ರಮಾನಂದರಾವ್ (ಹುಚ್ಚು ಬೆಳದಿಂಗಳಿನ ಹೂ ಬಾಣ), ಅನಕೃ (ಪೊರಕೆ), ಡಿ.ಎಸ್.ಕರ್ಕಿ (ನಾಲ್ದೆಸೆಯ ನೋಟ), ಶ್ರೀಧರಮೂರ್ತಿ (ಲಂಚ ಪ್ರಪಂಚ), ಕೆ.ವೆಂಕಟರಾಯಪ್ಪ (ವಿಚಾರ ಲಹರಿ),ಸದಾಶಿವ ಒಡೆಯರ (ಜೀವನ ಕಥೆ) ಮುಂತಾದವರು ತಂತಮ್ಮ ಪ್ರಬಂಧಗಳ ರಚನೆಯಿಂದ ಈಸಾಹಿತ್ಯ ಪ್ರಕಾರವನ್ನು ವಿಸ್ತರಿಸಿದ್ದಾರೆ. ಅ.ರಾ.ಮಿತ್ರರು ಕೂಡ ಒಬ್ಬ ಅತ್ಯುತ್ತಮ ಪ್ರಬಂಧಕಾರರು ಎಂಬುದಕ್ಕೆ ಅವರು ಬರೆದಿರುವ 'ಬಾಲ್ಕನಿಯ ಬಂಧುಗಳು', 'ಯಾರೋ ಬಂದಿದ್ದರು', 'ಸಂಕಲ್ಪಗಳು', 'ನಾನೇಕೆ ಕೊರೆಯುತ್ತೇನೆ' ಮತ್ತು ಆರತಕ್ಷತೆ– ಪ್ರಬಂಧಗಳು ಅತ್ಯುತ್ತಮವಾಗಿವೆ. ಎ.ಎನ್.ಮೂರ್ತಿರಾಯರ 'ಹಗಲುಗನಸುಗಳು', 'ಮಿನುಗುಮಿಂಚು', 'ಅಲೆಯುವ ಮನ', ಜನತಾ ಜನಾರ್ದನ', 'ಸಮಗ್ರ ಲಲಿತ ಪ್ರಬಂಧಗಳು' ಇವುಗಳು ಪ್ರಬಂಧ ಸಾಹಿತ್ಯದಲ್ಲಿ ಪ್ರಸಿದ್ಧಿ ಪಡೆದಿವೆ.
ಕನ್ನಡ ಪ್ರಬಂಧ ಸಾಹಿತ್ಯ ವಿಶಿಷ್ಟವಾಗಿ ವೈವಿಧ್ಯಪೂರ್ಣವಾಗಿ ಬೆಳೆದಿರುವುದನ್ನು ಗಮನಿಸಬಹುದು. ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಅನೇಕ ಬರಹಗಾರರು ವಿಫುಲವಾಗಿ ಕೊಡುಗೆ ನೀಡಿದ್ದಾರೆ. ಇಲ್ಲಿ ಕೆಲವರ ಹೆಸರು ಮತ್ತು ಕೆಲವು ಪ್ರಬಂಧಗಳನ್ನು ಮಾತ್ರ ತಿಳಿಸಲಾಗಿದೆ. ಕನ್ನಡ ಪ್ರಬಂಧ ಸಾಹಿತ್ಯ ಪ್ರಸ್ತುತದಲ್ಲಿ ವಿಭಿನ್ನ ನೆಲೆಗಳಲ್ಲಿ ಬೆಳವಣಿಗೆಯನ್ನು ಹೊಂದಿದೆ. ನಮ್ಮ ನಾಡಿನ ಸಾಂಸ್ಕೃತಿಕ ಪುನರುಜ್ಜೀವನದ ಸಂದರ್ಭದಲ್ಲಿ ಪ್ರವೇಶ ಮಾಡಿದ ಪ್ರಬಂಧ ಗದ್ಯ ಪ್ರಕಾರ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಕ ಶಕ್ತಿಯಾಯಿತು. ಕನ್ನಡ ಪ್ರಬಂಧ ಸಾಹಿತ್ಯ ಬೇರೆ ಬೇರೆ ವಿಚಾರಧಾರೆ, ತಾತ್ವಿಕ ಆಶಯಗಳನ್ನು ತನ್ನದಾಗಿಸಿಕೊಂಡು ರೂಪವೈವಿಧ್ಯವನ್ನು , ವೈಚಾರಿಕ ನೆಲೆಗಟ್ಟನ್ನು ಪಡೆದುಕೊಂಡಿದೆ. ಹಾಗೆಯೇ ಲಘು ಪ್ರಬಂಧ, ನೀಳ ಪ್ರಬಂಧ, ಹಾಸ್ಯ ಪ್ರಬಂಧ, ವಿನೋಧ ಪ್ರಬಂಧ, ವಿಚಾರ ಪ್ರಬಂಧಗಳಾಗಿ ತನ್ನ ಶಾಖೆಗಳನ್ನು ಸೃಷ್ಟಿಸಿಕೊಂಡು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

**ಪರಾಮರ್ಶನ ಗ್ರಂಥಗಳು :**

1. ಗಿರಿಡ್ಡಿ ಗೋವಿಂದರಾಜ (ಸಂ.) (2010), ಯುಗಧರ್ಮ ಹಾಗೂ ಸಾಹಿತ್ಯದರ್ಶನ ಸಾಹಿತ್ಯ ಮತ್ತು ಸಾಹಿತ್ಯ ಪ್ರಜ್ಞೆ, ಪ್ರಕಾಶಕರು : ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–02.
2. ಗಿರಿಡ್ಡಿ ಗೋವಿಂದರಾಜ (ಸಂ.) (2010), ಕನ್ನಡ ಸಾಹಿತ್ಯ ಸಂಗಾತಿ, ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ ಸಂಪುಟ–1, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–02.
3. ಪ್ರೊ..ಎಲ್.ಎಸ್.ಶೇಷಗಿರಿರಾವ್ (2013), ಹೊಸಗನ್ನಡ ಸಾಹಿತ್ಯ ಚರಿತ್ರೆ, ಪ್ರಕಾಶಕರು : ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು–04.
4. ಹೆಚ್.ನಂಜೇಗೌಡ (1995), ಕನ್ನಡ ಸಾಹಿತ್ಯ ಚರಿತ್ರೆ, ಪ್ರಕಾಶಕರು : ಚೇತನ ಪುಸ್ತಕಾಲಯ, ಮೈಸೂರು.
5. ಪ್ರೊ.ಎ.ರಂಗಸ್ವಾಮಿ, (ಪ್ರ.ಸಂ), ಲೇಖಕರು: ಡಾ.ಮ.ರಾಮಕೃಷ್ಣ, (2012), ಹೊಸಗನ್ನಡ ಕಾವ್ಯ ಪ್ರಕಾರಗಳು. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು–06.
6. ಪ್ರೊ.ಎ.ರಂಗಸ್ವಾಮಿ, (ಪ್ರ.ಸಂ), ಲೇಖಕರು : ಡಾ.ಜಿ.ಆರ್.ತಿಪ್ಪೇಸ್ವಾಮಿ, (2012), ಆಧುನಿಕ ಸಾಹಿತ್ಯ ಪ್ರಕಾರಗಳು. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು–06.
7. ರಂ.ಶ್ರೀ.ಮುಗಳಿ (1971), ಕನ್ನಡ ಸಾಹಿತ್ಯ ಚರಿತ್ರೆ, ಪ್ರಕಾಶಕರು : ಉಷಾ ಸಾಹಿತ್ಯ ಮಾಲೆ, ಮೈಸೂರು–01.